# ಶ್ರೀರಾಮಕೃಷ್ಣರ ಭಾವಚಿತ್ರಗಳು

ಸ್ವಾಮಿ ವಿದ್ಯಾತ್ಮಾನಂದ

(ಹಿಂದಿನ ಸಂಚಿಕೆಯಿಂದ ಮುಂದುವರೆದುದು)

ಚಿತ್ರ ೩ : ದಕ್ಷಿಣೇಶ್ವರದಲ್ಲಿ ಶ್ರೀರಾಮಕೃಷ್ಣರು

**ಶ್ರೀರಾಮಕೃಷ್ಣರ** ಚಿತ್ರಗಳಲ್ಲೆಲ್ಲ ಅತ್ಯಂತ ಪ್ರಮುಖವಾದುದು ಈ ಭಾವಚಿತ್ರ. ಇಂದು ರಾಮಕೃಷ್ಣ ಮಂದಿರಗಳಲ್ಲೆಲ್ಲ ಪೂಜಿಸಲ್ಪಡುವ ಚಿತ್ರ ಇದು. ಈ ಚಿತ್ರದಲ್ಲಿ ನಾವು ಶ್ರೀರಾಮಕೃಷ್ಣರು ಒಂದು ಸಣ್ಣ ಆಸನದ ಮೇಲೆ ಕುಳಿತಿರುವುದನ್ನು ಕಾಣುತ್ತೇವೆ. ಮುಂಚಾಚಿದ ಕೈಗಳೆರಡನ್ನೂ ಸ್ವಲ್ಪ ಜೋಡಿಸಿಕೊಂಡಿದ್ದಾರೆ. ಒಂದು ಬಿಳಿ ವಸ್ತ್ರವನ್ನು ಮಾತ್ರ ಧರಿಸಿದ್ದಾರೆ. ಮೊಳಕಾಲುಗಳು ಕಾಣಿಸುತ್ತಲಿವೆ. ಉಟ್ಟ ಬಟ್ಟೆಯ ಒಂದು ತುದಿಯನ್ನು ಎಡಭುಜದ ಮೇಲೆ ಹೊದ್ದುಕೊಂಡಿದ್ದಾರೆ. ಎಡಗಾಲಿನ ಸ್ವಲ್ಪಭಾಗ ಮಾತ್ರ ಹೊರಗೆ ಕಾಣಿಸುತ್ತಲಿದ್ದು ಬಲಗಾಲನ್ನು ಒಳಗೆ ಮಡಿಸಿಟ್ಟುಕೊಂಡಿದ್ದಾರೆ. ಬಲಗಾಲನ್ನು ಎಡಗಾಲಿನ ಹಿಮ್ಮಡಿಯ ಮೇಲೆ ಇರಿಸಿದ್ದಾರೆ. ಕಿರುಬೆರಳು ಬಿಟ್ಟು ಎಲ್ಲ ಬೆರಳುಗಳೂ ಕಾಣುತ್ತಿವೆ. ಎರಡೂ ಕೈಗಳ ಹೆಬ್ಬೆರಳುಗಳು ಒಂದಕ್ಕೊಂದು ಮುಟ್ಟುತ್ತಿವೆ, ಇತರ ಬೆರಳುಗಳು ಒಂದಕ್ಕೊಂದು ಬಂಧಿಸಿವೆ. ಆಕೃತಿ ನೇರವಾಗಿರುವಂತೆ ತೋರಿಬರುವುದಿಲ್ಲ. ಒಂದು ಕಡೆ ವಾಲಿದಂತೆ ಇರುವುದರಿಂದ, ಶಿರೋಭಾಗ ಎಡಭಾಗಕ್ಕಿರುವಂತೆ ಕಾಣುತ್ತದೆ. ಕಣ್ಣುಗಳು ಬಹುತೇಕ ಮುಚ್ಚಿವೆ. ದೃಷ್ಟಿ ಅಂತರ್ಮುಖವಾಗಿದೆ. ತುಟಿಗಳು ತೆರೆದಿವೆ. ಆದ್ದರಿಂದ ಮೇಲಿನ ಸಾಲಿನ ದಂತಪಂಕ್ತಿ ಕಾಣುತ್ತಿದೆ. ಈ ಫೋಟೋದ ಕೆಲವು ಪ್ರತಿಗಳಲ್ಲಿ ಎಡತೋಳು ಚಪ್ಪಟೆಯಾಗಿರುವಂತೆಯೂ ತಿರುಚಿಕೊಂಡಂತೆಯೂ ಇದೆ.

ಈ ಫೋಟೋವನ್ನು ತೆಗೆದಿದ್ದು ದಕ್ಷಿಣೇಶ್ವರದ ರಾಧಾಕಾಂತ ದೇಗುಲದ ಮೊಗಸಾಲೆಯಲ್ಲಿ. ರಾಧಾಕೃಷ್ಣ ದೇವಸ್ಥಾನದ ಪಶ್ಚಿಮ ಭಾಗದಲ್ಲಿ ಕುಳಿತು, ಉತ್ತರದಿಕ್ಕಿನ ಶಿವಮಂದಿರಗಳವರೆಗೂ ಇರುವ ಮುಂಭಾಗದ ಅಂಗಣಕ್ಕೆ ಮುಖಮಾಡಿ, ಶ್ರೀರಾಮಕೃಷ್ಣರು ಕುಳಿತುಕೊಂಡಿದ್ದಾರೆ. ಈ ಭಾವಚಿತ್ರವನ್ನು ತೆಗೆಯುವಾಗಿನ ಸನ್ನಿವೇಶದ ಅಧಿಕೃತ ವಿವರಣೆಯನ್ನು ಕೊಟ್ಟಿರುವವರು ಸ್ವಾಮಿ ನಿರ್ವಾಣಾನಂದರು. ಅವರು ಬಂಗಾಳಿ ಮಾಸಪತ್ರಿಕೆ **ಉದ್ಬೋಧನದಲ್ಲಿ** ಈ ಬಗ್ಗೆ ಹೀಗೆ ಬರೆಯುತ್ತಾರೆ : ''ಒಂದು ದಿನ ಬೇಲೂರು ಮಠದಲ್ಲಿ ಸಂಭಾಷಣೆಗಳ ಮಧ್ಯೆ ಸ್ವಾಮಿ ಅಖಂಡಾನಂದರು ನಮ್ಮನ್ನು ಕೇಳಿದರು, 'ಸರಿ, ಇಂದಿನ ದಿನಗಳಲ್ಲಿ ಪೂಜಿಸಲ್ಪಡುವ ಶ್ರೀರಾಮಕೃಷ್ಣರ ಭಾವಚಿತ್ರದ ಬಗ್ಗೆ ನಿಮಗೇನು ಗೊತ್ತು ?' ಎಂದು. ಅದರ ಬಗ್ಗೆ ಮಹತ್ವದ್ದೇನೂ ತಿಳಿಯದೆಂದು ನಾವು ಕೈಚೆಲ್ಲಿದೆವು. ಆಗ ಅವರು ಈ ಘಟನೆಯನ್ನು ನಮಗೆ ಹೇಳಿದರು :

''ಭವನಾಥ ಚಟರ್ಜಿ ಎನ್ನುವ ಶ್ರೀರಾಮಕೃಷ್ಣರ ಭಕ್ತ



ಬಾರಾನಗರದಲ್ಲಿ ವಾಸಿಸುತ್ತಿದ್ದನು. ಅವನು ಶ್ರೀರಾಮಕೃಷ್ಣರ ಭಾವಚಿತ್ರವೊಂದನ್ನು ತೆಗೆಸಬೇಕೆಂದು ಇಚ್ಛೆಪಟ್ಟ. ಒಮ್ಮೆ ಇದಕ್ಕೆ ಸಮ್ಮತಿಸುವಂತೆ ಶ್ರೀರಾಮಕೃಷ್ಣರನ್ನು ಬಹುವಾಗಿ ಕೇಳಿಕೊಂಡ. ಮರುದಿನ ಮಧ್ಯಾಹ್ನ ತನ್ನೊಡನೆ ಬಾರಾನಗರದಿಂದ ಒಬ್ಬ ಛಾಯಾಚಿತ್ರಗ್ರಾಹಕನನ್ನೂ ಕರೆತಂದ. ಗುರುಮಹಾರಾಜರು ಏನು ಮಾಡಿದರೂ ಒಪ್ಪಲೇ ಇಲ್ಲ. ಅವರು ರಾಧಾಕಾಂತ ದೇವಾಲಯದ ಕಡೆ ಹೋಗಿ ಬಿಟ್ಟರು. ಈ ಸಮಯಕ್ಕೆ ಸರಿಯಾಗಿ ನರೇಂದ್ರ (ಮುಂದೆ ಸ್ವಾಮಿ ವಿವೇಕಾನಂದರು) ಅಲ್ಲಿಗೆ ಬಂದ. ಎಲ್ಲವನ್ನೂ ಕೇಳಿ ''ಸ್ವಲ್ಪ ತಾಳು. ನಾನು ಇದಕ್ಕೆ ವ್ಯವಸ್ಥೆ ಮಾಡುತ್ತೇನೆ'' ಎಂದ. ನೇರವಾಗಿ ಶ್ರೀರಾಮಕೃಷ್ಣರು ಇದ್ದಲ್ಲಿಗೆ ಹೋಗಿ, ಧಾರ್ಮಿಕ ಮಾತುಕತೆಗಳನ್ನಾರಂಭಿಸಿದ. ಗುರುಮಹಾರಾಜರು ಸಮಾಧಿಸ್ಥರಾದರು. ನರೇಂದ್ರ ಹೋಗಿ ಇತರರನ್ನು ಕೂಗಿಕರೆದು, ಬೇಗನೆ ಚಿತ್ರ ತೆಗೆಯಲು ತಯಾರಿ ನಡೆಸುವಂತೆ ಆದೇಶಿಸಿದ.

''ಸಮಾಧಿಯ ನೆಲೆಯಲ್ಲಿ ಇದ್ದ ಗುರುಮಹಾರಾಜರ ದೇಹ ಒಂದು ಕಡೆ ವಾಲಿಕೊಂಡಿತ್ತು. ಅದನ್ನು ಸರಿಪಡಿಸಿ ನೆಟ್ಟಗೆ ಕೂರಿಸಲು ಕ್ಯಾಮೆರಾದವನು ಅವರ ಗಲ್ಲವನ್ನು ನಯವಾಗಿ

ಎತ್ತಲು ಹೋದ. ಮುಟ್ಟಿದೊಡನೆಯೆ ಶ್ರೀರಾಮಕೃಷ್ಣರ ಇಡೀ ದೇಹವೇ ಕಾಗದದಂತೆ ಮೇಲೆದ್ದು ಬಂತು. ಅಷ್ಟು ಹಗುರವಾಗಿತ್ತು ಅವರ ದಿವ್ಯಶರೀರ ! ನರೇಂದ್ರ ಕ್ಯಾಮೆರಾದವನನ್ನು ಗದರಿಸಿದ 'ಏಯ್, ಏನು ಮಾಡುತ್ತಿರುವೆ ? ಬೇಗ ಬೇಗ ಕ್ಯಾಮೆರಾ ಸಿದ್ಧ ಮಾಡು' ಎಂದು. ಈ ಭಾವಚಿತ್ರ ತೆಗೆದದ್ದು ಹೀಗೆ. ಕೆಲದಿನಗಳ ನಂತರ ಭವನಾಥ ಆ ಫೋಟೋದ ಪ್ರತಿಯೊಂದನ್ನು ತಂದು ಶ್ರೀರಾಮಕೃಷ್ಣರಿಗೆ ತೋರಿಸಿದ. ಅದನ್ನು ನೋಡಿದ ಅವರು 'ಇದು ಉನ್ನತ ಯೋಗಸ್ಥಿತಿಯನ್ನು ಪ್ರತಿನಿಧಿಸುವುದು. ಈ ಚಿತ್ರ ಮುಂದೆ ಎಲ್ಲರ ಮನೆಯಲ್ಲಿ ಪೂಜಿಸಲ್ಪಡುವುದು' ಎಂದರು."

ನಾನು "ಸಮಾಧಿಸ್ಥಿತಿಯಲ್ಲಿರುವ ವ್ಯಕ್ತಿ ಸಹಜವಾಗಿಯೆ ಹಗುರವಾಗಿರುತ್ತಾರೆಯೇ" ಎಂದು ಸ್ವಾಮಿ ನಿರ್ವಾಣಾನಂದರನ್ನು ಕೇಳಿದೆ. ಅದಕ್ಕವರು "ಕೆಲಬಗೆಯ ಹಾಗೂ ಕೆಲಮಟ್ಟದ ಸಮಾಧಿ ನೆಲೆಗಳಲ್ಲಿ ಹಾಗಾಗುವುದುಂಟು" ಎಂದರು.

ಇದೇ ಘಟನೆಯ ಇನ್ನೊಂದು ಆವೃತ್ತಿಯ ಪ್ರಕಾರ ಛಾಯಾ ಚಿತ್ರಕಾರನ ಹೆಸರು ಅಭಿನಾಶ ಚಂದ್ರ ಧನ್ ಎಂದು. ಭವನಾಥನಂತೆ ಅವನೂ ಬಾರಾನಗರದ ನಿವಾಸಿ. ಇದರ ಪ್ರಕಾರ ಫೋಟೋವನ್ನು ತೆಗೆದಿದ್ದು ಅಕ್ಟೋಬರ್ ೧೮೮೩ರ ಒಂದು ಭಾನುವಾರ, ಬೆಳಗ್ಗೆ ೯.೩೦ ಗಂಟೆಯ ಸುಮಾರಿಗೆ.

ಸ್ವಾಮಿ ಅಭೇದಾನಂದರ ಪ್ರಕಾರ ಛಾಯಾಚಿತ್ರಕಾರ ಧನ್ ಗಾಜಿನ ನೆಗಟಿವ್ ಅನ್ನು ಹೊರತೆಗೆಯುತ್ತಿದ್ದಾಗ, ಅದು ಬಿದ್ದು ಮೇಲ್ಭಾಗದಲ್ಲಿ ಒಡೆದು ಹೋಯಿತು. ಆ ದೋಷವನ್ನು ಮರೆಸಲು ಧನ್ ಆ ಭಾಗವನ್ನು ಅರ್ಧಚಂದ್ರಾಕೃತಿಯಲ್ಲಿ ಕತ್ತರಿಸಿದ. ಅದೇ ಈ ಚಿತ್ರದಲ್ಲಿ ಶ್ರೀರಾಮಕೃಷ್ಣರ ಹಿಂದೆ ಕಾಣಬರುವ ಕಮಾನಿನ ಆಕೃತಿ. ಸ್ವಾಮಿ ನಿರ್ವಾಣಾನಂದರು ಕೆಲವು ಪ್ರತಿಗಳಲ್ಲಿ ಆ ಒಡಕನ್ನು ಈಗಲೂ ಕಾಣಬಹುದು ಎನ್ನುತ್ತಾರೆ. ಈ ಕಮಾನಿನ ಆಕೃತಿಯು ಫೋಟೋವನ್ನು ಆಕರ್ಷಣೀಯವಾಗಿ ಮಾಡುವುದಕ್ಕೆ ಜೋಡಿಸಿದ್ದು ಎಂದು ಅವರ ಅನಿಸಿಕೆ. ಆ ಕಾಲದ ಹಲವಾರು ಚಿತ್ರಗಳಲ್ಲಿ ಈ ಬಗೆಯ ಆಕೃತಿಯನ್ನು ಕಾಣಬಹುದು. ಹೇಗಾದರೂ ಇರಲಿ, ಛಾಯಾಚಿತ್ರಕಾರನು ಈ ಚಿತ್ರದ ಹಲವು ಪ್ರತಿಗಳನ್ನು ತೆಗೆದು ಭವನಾಥನಿಗೆ ಕೊಟ್ಟ.

ಸ್ವಾಮಿ ವಿಶುದ್ಧಾನಂದರ ಪ್ರಕಾರ ಈ ಚಿತ್ರವನ್ನು ಕಂಡೊಡನೆಯೇ ಶ್ರೀರಾಮಕೃಷ್ಣರು ಭಾವಪರವಶರಾದರು. ಅದನ್ನು ಹಲವು ಬಾರಿ ತಮ್ಮ ಹಣೆಗೆ ಮುಟ್ಟಿಕೊಂಡು "ಈ ಚಿತ್ರ ಚೆನ್ನಾಗಿ ಬಂದಿದೆ. ಇಲ್ಲಿರುವ ಭಾವ ಅತಿ ಉನ್ನತ ಮಟ್ಟದ್ದು, ಪರಮಾತ್ಮನಲ್ಲಿ ಸಂಪೂರ್ಣವಾಗಿ ಲೀನವಾದದ್ದು. ಇಲ್ಲಿ ಭಗವಂತನು ತನ್ನ ಸ್ವಸ್ವರೂಪದಲ್ಲಿ ನೆಲೆನಿಂತಿರುವುದನ್ನು ನೋಡಬಹುದು" ಎಂದರು. ಶ್ರೀರಾಮಕೃಷ್ಣರು ತಮ್ಮ ಕೊಠಡಿಯಲ್ಲಿ ತೂಗುಹಾಕಿದ್ದ ಚಿತ್ರಗಳ ಮಧ್ಯೆ ಈ ಫೋಟೋ ಕೂಡ ಇತ್ತು. ಆದರೆ, ತಮ್ಮ ಮತ್ತು ಕ್ರಿಸ್ತನ ಪಟಗಳಿಗೆ ಕುಂಕುಮ ಮುಂತಾದುವನ್ನು ಇಡುತ್ತಿರಲಿಲ್ಲ.

ಒಮ್ಮೆ ಭಕ್ತೆಯೊಬ್ಬಳು ಶ್ರೀಮಾತೆ ಶಾರದಾದೇವಿಯವರನ್ನು ಕೇಳುತ್ತಾಳೆ : "ಅಮ್ಮ, ನಿಮ್ಮಲ್ಲಿರುವ ಗುರುಮಹಾರಾಜರ ಚಿತ್ರ ತುಂಬ ಚೆನ್ನಾಗಿದೆ. ಇದನ್ನು ನೋಡಿದೊಡನೆಯೆ ಭಾವನೆ ಹೊಮ್ಮುತ್ತದೆ. ಇದು ಶ್ರೀರಾಮಕೃಷ್ಣರ ಹಾಗೆಯೇ ಇದೆಯೇನು ?" ಅದಕ್ಕೆ ಶ್ರೀಮಾತೆಯವರು ಉತ್ತರಿಸುತ್ತಾರೆ : "ಹೌದು, ಈ ಚಿತ್ರ ತುಂಬ ಚೆನ್ನಾಗಿದೆ. ಇದು ಮೊದಲು ಒಬ್ಬ ಬ್ರಾಹ್ಮಣ ಅಡಿಗೆಯವನಿಗೆ ಸೇರಿತ್ತು. ಫೋಟೋವಿನ ಮೂಲಪ್ರತಿಯಿಂದ ಹಲವಾರು ಪ್ರತಿಗಳನ್ನು ಮಾಡಿದ್ದರು. ಈ ಬ್ರಾಹ್ಮಣ ಒಂದನ್ನು ತೆಗೆದುಕೊಂಡ. ಮೊದಮೊದಲು ಇದು ಬಹಳ ಕಪ್ಪಗಿತ್ತು, ಕಾಳಿ ಪ್ರತಿಮೆಯ ಹಾಗೆ. ಆದ್ದರಿಂದ ಇದನ್ನು ಬ್ರಾಹ್ಮಣನಿಗೆ ಕೊಟ್ಟಿದ್ದರು. ಅವನು ದಕ್ಷಿಣೇಶ್ವರವನ್ನು ಬಿಟ್ಟು ಎಲ್ಲಿಗೋ ಹೋದ, ಎಲ್ಲಿಗೆಂದು ಜ್ಞಾಪಕದಲ್ಲಿಲ್ಲ. ಹೋಗುವಾಗ ಈ ಚಿತ್ರವನ್ನು ನನಗೆ ಕೊಟ್ಟು ಹೋದ. ನಾನು ಇತರ ದೇವದೇವಿಯರ ಚಿತ್ರಗಳೊಡನೆ ಇದನ್ನೂ ಇಟ್ಟು ಪೂಜಿಸಲಾರಂಭಿಸಿದೆ. ಆಗ ನಾನು ನಹಬತ್ತಿನಲ್ಲಿ ವಾಸಿಸುತ್ತಿದ್ದೆ. ಗುರುಮಹಾರಾಜರು ಒಮ್ಮೆ ಅಲ್ಲಿಗೆ ಬಂದರು. ಈ ಚಿತ್ರವನ್ನು ನೋಡಿ ಉದ್ಗರಿಸಿದರು, "ಏನಿದು!" ಎಂದು. ನಂತರ ಅವರು ತಮ್ಮ ಕೈಯಿಂದಲೇ ಬಿಲ್ವಪತ್ರೆ ಮತ್ತು ಹೂವುಗಳನ್ನು ತೆಗೆದುಕೊಂಡು ಈ ಚಿತ್ರಕ್ಕೆ ಅರ್ಪಿಸಿ ಪೂಜಿಸಿದರು. ಇದೇ ಆ ಚಿತ್ರ. ಆ ಬ್ರಾಹ್ಮಣ ಹಿಂತಿರುಗಿ ಬರಲೇ ಇಲ್ಲ. ಹೀಗಾಗಿ ಈ ಫೋಟೋ ನನ್ನಲ್ಲೇ ಉಳಿಯಿತು." ಶ್ರೀರಾಮಕೃಷ್ಣರೇ ಪೂಜಿಸಿದ ಆ ಫೋಟೋ ಇಂದಿಗೂ ಕಲ್ಕತ್ತೆಯ ಉದ್ಬೋಧನದಲ್ಲಿ ಇದೆ. ಪೂಜಾಗೃಹದಲ್ಲಿ ಪ್ರತಿನಿತ್ಯ ಇದನ್ನು ಪೂಜಿಸುತ್ತಾರೆ.

ಸ್ವಾಮಿ ವೀರೇಶ್ವರಾನಂದರ ಪ್ರಕಾರ ಶ್ರೀರಾಮಕೃಷ್ಣರ ಸ್ತ್ರೀ ಭಕ್ತೆಯಾದ ಗೋಪಾಲೇರ್ ಮಾ ಭವನಾಥನಿಂದ ಈ ಚಿತ್ರದ ಒಂದು ಪ್ರತಿಯನ್ನು ಪಡೆದಿದ್ದಳು. ಗೋಪಾಲೇರ್ ಮಾ ಭಗಿನಿ ನಿವೇದಿತೆಯ ಶಾಲೆಯಲ್ಲಿ ಮರಣಹೊಂದಿದಳು. ನಂತರ ಆ ಫೋಟೋ ಶ್ರೀಮಾತೆ ಶಾರದಾದೇವಿಯವರ ಬಳಿ ಇತ್ತು. ಶ್ರೀಮಾತೆಯವರ ನಿರ್ಯಾಣಾನಂತರ ಅದನ್ನು ಬೇಲೂರು ಮಠಕ್ಕೆ ತರಲಾಯಿತು. ಅದನ್ನು ಈಗ ಶ್ರೀಮಾತೆಯವರ ಮಂದಿರದಲ್ಲಿ ಇಟ್ಟು ಪೂಜಿಸಲಾಗುತ್ತಿದೆ.

ಇನ್ನೊಂದು ಮೂಲಪ್ರತಿ ಬೇಲೂರು ಮಠದ ಶ್ರೀರಾಮಕೃಷ್ಣ ಮಂದಿರದ ಮೇಲಂತಸ್ತಿನಲ್ಲಿರುವ ಗುರುಮಹಾರಾಜರ ಮಲಗುವ ಕೊಠಡಿಯಲ್ಲಿದೆ. ಇದು ಮುಂಚೆ ಬಾರಾನಗರ ಮಠದಲ್ಲಿತ್ತು. ಬೇಲೂರು ಮಠ ಸ್ಥಾಪನೆಯಾದಾಗ ಇದನ್ನೇ ಸ್ವಾಮಿ ವಿವೇಕಾನಂದರು ಹೊತ್ತುತಂದು ಪೂಜಾಗೃಹದಲ್ಲಿ ಪ್ರತಿಷ್ಠಾಪಿಸಿದರು. ೧೯೩೮ರಲ್ಲಿ ನೂತನ ಮಂದಿರ ನಿರ್ಮಾಣವಾದ ನಂತರ ಅದನ್ನು ಈಗಿರುವಲ್ಲಿ ಇಡಲಾಯಿತು. ಸ್ವಾಮಿ ನಿರ್ವಾಣಾನಂದರ ಪ್ರಕಾರ ಶ್ರೀರಾಮಕೃಷ್ಣರ ಕೊಠಡಿಯಲ್ಲಿ ತೂಗಹಾಕಿದ್ದ ಪಟ ಇದೇ. ಶ್ರೀರಾಮಕೃಷ್ಣರ ಮಹಾಸಮಾಧಿಯ ನಂತರ ಇದು ಅವರ ಸಂನ್ಯಾಸಿಶಿಷ್ಯರ ಕೈಸೇರಿತು.

ನಾಲ್ಕನೆಯ ಮೂಲಪ್ರತಿಯನ್ನು ಸ್ವಾಮಿ ವಿವೇಕಾನಂದರು, ತಾವು ಅಮೇರಿಕೆಗೆ ತೆರಳುವ ಮುನ್ನ ವಾರಾಣಸಿಯ ಪ್ರಮದದಾಸ ಮಿತ್ರರಿಗೆ ಕೊಟ್ಟರೆಂದು ತಿಳಿದು ಬರುತ್ತದೆ. ಹಲವು ವರ್ಷಗಳ ನಂತರ ವಾರಾಣಸಿಯಲ್ಲಿ ಬ್ರಿಟಾನಿಯಾ ವಿಶ್ವಕೋಶದ ಸಂಪುಟಗಳಲ್ಲೊಂದರ ಮಧ್ಯೆ ಇದು ಕಂಡು ಬಂತು. ಆ ವೇಳೆಗಾಗಲೆ ಇತರ ಮೂಲ ಪ್ರತಿಗಳು ಕಾಲವಶದಿಂದ ಬಹಳ ಮಂಕಾಗಿದ್ದವು. ಆದರೆ ಈ ಪ್ರತಿ ಉತ್ತಮ ಸ್ಥಿತಿಯಲ್ಲಿದ್ದುದರಿಂದ, ಇದನ್ನು ಉಪಯೋಗಿಸಿಕೊಂಡು ಹೊಸ ನೆಗಟಿವ್ ಮತ್ತು ಫೋಟೋಗಳನ್ನು ಮಾಡಿಸಲಾಯಿತು. ಈ ಕಾರ್ಯವನ್ನು ಕೈಗೊಂಡವರು ಶ್ರೀರಾಮಕೃಷ್ಣ ಮಹಾಸಂಘದ ೭ನೆಯ ಮಹಾಧ್ಯಕ್ಷರಾಗಿದ್ದ ಸ್ವಾಮಿ ಶಂಕರಾನಂದಜಿಯವರು. ಈಗ ಅಸ್ತಿತ್ವದಲ್ಲಿರುವ ಬಹುತೇಕ ಫೋಟೋಗಳು ಈ ಮೂಲಪ್ರತಿಯಿಂದಲೇ ತಯಾರಿಸಲ್ಪಟ್ಟವುಗಳಾಗಿವೆ. ಈ ಮೂಲಪ್ರತಿ ಈಗ ಎಲ್ಲಿದೆ ಎಂದು ನನಗೆ ತಿಳಿಯಲಾಗಲಿಲ್ಲ.

## ಚಿತ್ರ ೪ ಮತ್ತು ೫ : ಮಹಾಸಮಾಧಿಯ ನಂತರ ಶ್ರೀರಾಮಕೃಷ್ಣರು

ಈ ಚಿತ್ರಗಳು ನಮಗೆ ತೋರಿಸುವುದು ಇಷ್ಟನ್ನು : ಒಂದು ಅಲಂಕೃತ ಮಂಚದ ಮೇಲೆ ಶ್ರೀರಾಮಕೃಷ್ಣರ ಪಾರ್ಥಿವ ಶರೀರವನ್ನು ಮಲಗಿಸಲಾಗಿದೆ. ಮುಖ ತುಂಬ ತೆಳ್ಳಗಿದೆ. ಕಣ್ಣುಗಳು ಅರ್ಧ ಮುಚ್ಚಿವೆ. ಕೈಗಳು ದೇಹದ ಮೇಲಿವೆ. ಎಡಗಡೆಯ ಕಡೆ ಮಲಗಿದ್ದು, ಬಲಗಾಲು ಎಡಗಾಲಿನ ಮೇಲಿದೆ. ಗಂಧವನ್ನು ಅವರ ಹಣೆಗೆ ಹಚ್ಚಲಾಗಿದೆ ಮತ್ತು ಕೊರಳಿಗೆ ಹೂಮಾಲೆಗಳನ್ನು ಹಾಕಲಾಗಿದೆ. ಮಂಚವನ್ನು ಹೂವುಗಳು ಮತ್ತು ಹಾರಗಳಿಂದ ಮಚ್ಚಿದ್ದಾರೆ. ಮಂಚದ ನಾಲ್ಕು ತುದಿಗಳಲ್ಲಿ ಸೊಳ್ಳೆಪರದೆಯನ್ನು ಕಟ್ಟಲು ಬಳಸುವ ಕಡ್ಡಿಗಳಿವೆ. ಅದರ ಕೆಳಭಾಗ ಮತ್ತು ಮೇಲ್ಭಾಗಗಳನ್ನು ಹಾರಗಳಿಂದ ಸೇರಿಸಿ ಕಟ್ಟಿದ್ದಾರೆ. ಕಾಶಿಪುರ ಉದ್ಯಾನ ಗೃಹದ ಸ್ವಲ್ಪಭಾಗ ಹಿಂದೆ ಕಾಣಿಸುತ್ತಿದೆ. ಎಡಭಾಗದಲ್ಲಿ ಮಡಿಸಿಟ್ಟ ಹಾಸಿಗೆ ಕಾಣುತ್ತಿದೆ. ಸುಮಾರು ೫೦ಕ್ಕೂ ಹೆಚ್ಚು ಜನ ಭಕ್ತರು ಮತ್ತು ಶಿಷ್ಯರು ಮಂಚದ ಹಿಂದೆ ನಿಂತಿದ್ದಾರೆ. ಅವರಲ್ಲಿ ಅರ್ಧದಷ್ಟು ಜನರನ್ನು ಗುರುತಿಸಲಾಗಿದೆ. ಬಲರಾಮ ಬಸು ಒಂದು ಚಿಹ್ನೆಯಿರುವ ಕೋಲನ್ನು ಹಿಡಿದು ನಿಂತಿದ್ದಾನೆ. ಅದು ಸರ್ವಧರ್ಮ ಸಾಮರಸ್ಯವನ್ನು ಪ್ರತಿನಿಧಿಸುತ್ತದೆ ಎಂದು ಹೇಳಲಾಗಿದೆ. ಆ ಚಿಹ್ನೆಯಲ್ಲಿ ಶೈವರ ತ್ರಿಶೂಲ, ಅದ್ವೈತಿಗಳ ಓಂಕಾರ, ವೈಷ್ಣವರ ತುಳಸೀಮಾಲೆ, ಮುಸ್ಲಿಮರ ಅರ್ಧಚಂದ್ರಾಕೃತಿ, ಕ್ರೈಸ್ತರ ಶಿಲುಬೆಗಳು ಕಾಣುತ್ತಿವೆ.

ಈ ಎರಡೂ ಫೋಟೋಗಳು ಬಹುತೇಕ ಸಮಾನವಾಗಿವೆ. ಕೆಲವು ಭಕ್ತರು ತಮ್ಮ ಸ್ಥಾನವನ್ನು ಬದಲಾಯಿಸಿಕೊಂಡಿದ್ದಾರೆ. ಮೊದಲನೆಯ ಚಿತ್ರದಲ್ಲಿ ನರೇಂದ್ರ ಅಂಗವಸ್ತ್ರವನ್ನು ಹೊದ್ದುಕೊಂಡಿದ್ದಾನೆ. ಎರಡನೆಯದರಲ್ಲಿ ಇಲ್ಲ, ಅಷ್ಟೆ. ಓದುಗರು ಈ ಚಿತ್ರಗಳ ಮೇಲ್ಭಾಗವನ್ನು ಮಾತ್ರ ಕೆಲವು ಪುಸ್ತಕಗಳಲ್ಲಿ ಮುದ್ರಿತವಾಗಿರುವುದನ್ನು ಕಂಡಿರಬಹುದು. ಶ್ರೀರಾಮಕೃಷ್ಣರಿರುವ ಕೆಳಭಾಗವು ಶ್ರೀರಾಮಕೃಷ್ಣ ಮಹಾಸಂಘದಿಂದ ಪ್ರಕಟವಾದ ಪುಸ್ತಕಗಳಲ್ಲಿ ಕಾಣಿಸುವುದಿಲ್ಲ. ಕಾರಣ, ಭಕ್ತರಿಗೆ ಗುರುಮಹಾರಾಜರ ಅತಿ ಶಿಥಿಲವಾದ ದೇಹವನ್ನು ನೋಡಿ ಮನಸ್ಸಿಗೆ ಬಹಳ ನೋವಾಗಬಹುದು ಎಂದು. ಅಲ್ಲದೆ ಭಕ್ತನೋರ್ವನಿಗೆ ಶ್ರೀರಾಮಕೃಷ್ಣರ ಮರಣವನ್ನು ಕಲ್ಪಿಸಲೂ ಆಗದು.

ಶ್ರೀರಾಮಕೃಷ್ಣರು ೧೮೮೬ನೆ ಆಗಸ್ಟ್ ೧೬ ನೆ ತಾರೀಖು, ನಡುರಾತ್ರಿ ಒಂದು ಗಂಟೆ, ಎರಡು ನಿಮಿಷಕ್ಕೆ ಮಹಾಸಮಾಧಿಯನ್ನು ಹೊಂದಿದರು. ಬೆಳಗಿನ ಹೊತ್ತಿಗೆ ಕಲ್ಕತ್ತೆಯ ತುಂಬ ಸುದ್ದಿ ಹರಡಿ, ಅವರ ಕಡೆಯ ದರ್ಶನವನ್ನು ಮಾಡಲು ಜನ ಅಧಿಕಸಂಖ್ಯೆಯಲ್ಲಿ ಬರಲಾರಂಭಿಸಿದರು. ಮೊದಲು ಗುರುಮಹಾರಾಜರು ಗಾಢ ಸಮಾಧಿಯಲ್ಲಿದ್ದಾರೆಂದೂ ಮರಣಹೊಂದಿಲ್ಲವೆಂದೂ ಆಶಿಸಲಾಗಿತ್ತು. ಮಧ್ಯಾಹ್ನದ ಹೊತ್ತಿಗೆ ಅಲ್ಲಿಗೆ ಬಂದ ಡಾ. ಮಹೇಂದ್ರಲಾಲ ಸರ್ಕಾರ್, ದೇಹಪರೀಕ್ಷೆ ಮಾಡಿ, ಗುರುಮಹಾರಾಜರು ಪ್ರಾಣ ಬಿಟ್ಟಿರುವುದಾಗಿ ತಿಳಿಸಿದರು. ಮಹೇಂದ್ರರ ನಿರ್ಧಾರವನ್ನು ಅಂತಿಮವೆಂದು ಬಗೆದು ಅಂತ್ಯಕ್ರಿಯೆಗೆ ಸಿದ್ಧತೆ ಮಾಡಲಾಯಿತು.

ಡಾ. ಮಹೇಂದ್ರಲಾಲ ಸರ್ಕಾರರ ಹಸ್ತಲಿಖಿತ ದಿನಚರಿ, ಅದ್ವೈತಾಶ್ರಮದ ಸ್ವಾಮಿ ಅದ್ವಯಾನಂದರ ಬಳಿ ನನಗೆ ದೊರಕಿತು. ಅದರಲ್ಲಿ ಅವರು ಹೀಗೆ ಬರೆದಿದ್ದಾರೆ :

**ಸೋಮವಾರ, ಆಗಸ್ಟ್ ೧೬, ೧೮೮೬**

*ಪರಮಹಂಸರ ಬಳಿಗೆ ಹೋಗಿದ್ದೆ. ಅವರು ಮೃತ ಹೊಂದಿರುವುದನ್ನು ಕಂಡೆ. ಅವರು ಹೋದ ರಾತ್ರಿ ೧.೦೦*



*ಗಂಟೆಯ ಹೊತ್ತಿಗೆ ಮರಣಹೊಂದಿದ್ದರು. ಅವರು ಎಡಬದಿಗೆ ಮಲಗಿದ್ದರು. ಕಾಲುಗಳು ನೀಳವಾಗಿ ಚಾಚಿದ್ದವು. ಕಣ್ಣು ಮತ್ತು ಬಾಯಿ ಸ್ವಲ್ಪ ತೆರೆದಿದ್ದವು. ಅವರ ಭಕ್ತರು, ಅವರಲ್ಲಿ ಕೆಲವರಾದರೂ, ಅವರು ಸತ್ತಿಲ್ಲ, ಸಮಾಧಿಯಲ್ಲಿದ್ದಾರೆ ಎಂದು ಭಾವಿಸಿದ್ದರು. ಆ ಭಾವನೆ ಯನ್ನು ನಾನು ದೂರಮಾಡಿದೆ. ಪರಮಹಂಸರ ಫೋಟೋವನ್ನು ತೆಗೆಸಲು ಅವರಿಗೆ ಹೇಳಿ, ನನ್ನ ಕಾಣಿಕೆಯಾಗಿ ಹತ್ತು ರೂಪಾಯಿ ಗಳನ್ನು ಕೊಟ್ಟೆ.*

೫ ಗಂಟೆಯ ಹೊತ್ತಿಗೆ ಪಾರ್ಥಿವಶರೀರವನ್ನು ಕೆಳಗೆ ತಂದು ಮಂಚದ ಮೇಲೆ ಇರಿಸಲಾಯಿತು. ಕಾಷಾಯವಸ್ತ್ರವನ್ನು ಹೊದಿಸಿ, ಹೂವುಗಂಧಗಳಿಂದ ಸಿಂಗರಿಸಲಾಯಿತು. ಫೋಟೋ ತೆಗೆಯಲಾಯಿತು. ಭಜನೆ ಕೀರ್ತನೆಗಳೊಂದಿಗೆ ಶರೀರವನ್ನು ಕಾಶಿಪುರದ ಸ್ಮಶಾನಘಟ್ಟಕ್ಕೆ ಕೊಂಡೊಯ್ಯಲಾಯಿತು. ಮೆರವಣಿಗೆ ಸಾಗುತ್ತಿದ್ದಂತೆ ಜನರು ರೋದಿಸಿದರು. ಚಿತೆಯ ಮೇಲೆ ಶರೀರವನ್ನಿರಿಸಿ, ಅಗ್ನಿಸಂಸ್ಕಾರವನ್ನು ಮಾಡಲಾಯಿತು. ತ್ರೈಲೋಕ್ಯ ಸಂನ್ಯಾಲನು ಸಂದರ್ಭಕ್ಕೆ ತಕ್ಕಂತೆ ಕೆಲವು ಹಾಡುಗಳನ್ನು ಹಾಡಿದನು. ಎರಡು ಗಂಟೆಗಳೊಳಗಾಗಿ ಎಲ್ಲವೂ ಮುಗಿಯಿತು.

ಬೇಲೂರು ಮಠಕ್ಕೆ ನೇರವಾಗಿ ಗಂಗಾನದಿಯ ಎದುರು ದಡದಲ್ಲಿರುವ ಕಾಶಿಪುರ ಸ್ಮಶಾನಘಟ್ಟ ಈಗಲೂ ಸ್ಮಶಾನ ಭೂಮಿಯೇ ಆಗಿದೆ. ಶ್ರೀರಾಮಕೃಷ್ಣರ ದಹನ ನಡೆದ ಸ್ಥಳದಲ್ಲಿ ಒಂದು ಸ್ಮಾರಕವಿದೆ.

ಶ್ರೀರಾಮಕೃಷ್ಣರನ್ನು ಕುರಿತು ಒಮ್ಮೆ ಶ್ರೀಮಾತೆಯವರು ಭಕ್ತರಿಗೆ ಹೇಳಿದರು. "ಅವರು ಖಂಡಿತವಾಗಿಯೂ ಸತ್ಯವಾಗಿಯೂ ಭಗವಂತನೇ ಸರಿ. ಇತರರ ದುಃಖದುಮ್ಮಾನಗಳನ್ನು ಕಳೆಯಲೆಂದೇ ಅವರು ಮಾನವ ರೂಪ ತಳೆದಿದ್ದರು. ರಾಜನೊಬ್ಬ ಮಾರುವೇಷದಲ್ಲಿ ನಗರದಲ್ಲಿ ಸುತ್ತಾಡುವಂತೆ ಅವರು ಅತ್ತಿತ್ತ ಓಡಾಡಿದರು. ಅವರ ನಿಜರೂಪ ತಿಳಿದೊಡನೆಯೆ ಕಣ್ಮರೆಯಾದರು." ಕಣ್ಮರೆಯಾದರೇನು? ಖಂಡಿತ ಇಲ್ಲ. ಅವರ ರೂಪವನ್ನು ಫೋಟೋಮಾಧ್ಯಮದಲ್ಲಿ ಸೆರೆಹಿಡಿದು ಮಾನವ ಕುಲದ ಒಳಿತಿಗಾಗಿ ಈ ಭುವಿಯಲ್ಲಿ ಸಂಗ್ರಹಿಸಲಿಡಲಾಗಿದೆ. ಭಕ್ತನ ಪಾಲಿಗೆ ಶ್ರೀರಾಮಕೃಷ್ಣರ ಭಾವಚಿತ್ರಗಳು ಆ ಜೀವಂತ ಭಗವಂತ ಬಿಟ್ಟುಹೋದ ಕುರುಹುಗಳೇ ಆಗಿವೆ. ಅವು ಶ್ರೀಮಾತೆಯವರು ಹೇಳುವಂತೆ, ಅದಕ್ಕಿಂತಲೂ ಮಿಗಿಲಾದುವುಗಳು, ಅವು ದಿವ್ಯತೆಯ ಪ್ರತಿಮಾ ರೂಪಗಳು.

### ಆಧುನಿಕ ಅಮೆರಿಕದ ಧೋರಣೆ ಮತ್ತು ವಚನವೇದ

ಒಬ್ಬ MIT ವಿದ್ಯಾರ್ಥಿ ಸಲಹೆಗಾಗಿ ನನ್ನೆಡೆಗೆ ಬರುತ್ತಿದ್ದ. ಅವನು ತುಂಬ ಬುದ್ಧಿವಂತ. MIT ಪದವಿಯ ನಂತರ ಅಲ್ಲಿಯೇ ಅವನಿಗೆ ಕೆಲಸ ಸಿಕ್ಕಿತು. ಮುಂದೆ ಅವನು ಪ್ರೊಫೆಸರ್ ಆಗಿ ಮದುವೆಯಾದನು. ಆಗ ಅವನಿಗೆ ನಾನು ಆಂಗ್ಲ ಭಾಷೆಯ "ಶ್ರೀರಾಮಕೃಷ್ಣ ವಚನವೇದ"ವನ್ನು ಉಡುಗೊರೆಯಾಗಿ ಕೊಟ್ಟೆ. ಗಂಡಹೆಂಡಿರಿಬ್ಬರೂ ಶ್ರೀರಾಮಕೃಷ್ಣರ ಬೋಧನೆಗಳಲ್ಲಿ ಆಸಕ್ತಿಯುಳ್ಳವರು. ಆದರೆ ಅದರಲ್ಲಿ "ಕಾಮ-ಕಾಂಚನ ತ್ಯಾಗ" ದ ವಿಷಯ ಬಂದಾಗ ಅವರಿಗೆ ತುಂಬ ಕಸಿವಿಸಿಯಾಗುತ್ತಿತ್ತು. ಅವರು ಈ ವಿಷಯವನ್ನು ನನಗೆ ತಿಳಿಸಿದಾಗ ನಾನು, ತಮಗೇನು ಬೇಕೊ ಅದನ್ನು ಓದಿ ಉಳಿದಿದ್ದನ್ನು ಕಡೆಗಣಿಸಲು ಹೇಳಿದೆ.

ಕೆಲವು ವರ್ಷಗಳ ನಂತರ MITಯ ಅಧ್ಯಕ್ಷರು ಮತ್ತು ಪ್ರಾಧ್ಯಾಪಕರುಗಳನ್ನು ಒಂದು ಔತಣಕ್ಕಾಗಿ ಆಹ್ವಾನಿಸಲಾಗಿತ್ತು. ಮೇಲೆ ಹೇಳಿದ ಪ್ರೊಫೆಸರ್ ನನ್ನ ಹತ್ತಿರ ಬಂದು ಕುಳಿತು, "ನಿಮ್ಮ ಹತ್ತಿರ ಎಷ್ಟು 'ವಚನವೇದ'ದ ಪ್ರತಿಗಳಿವೆ?" ಎಂದು ಕೇಳಿದರು. ನಾನು ಆಗ ಕೇಳಿದೆ : "ಏನು, ನೀವು ಅವನ್ನು ಸುಟ್ಟುಹಾಕಬೇಕೆಂದಿರುವಿರಾ?" ಅವರು "ಇಲ್ಲ" ಎಂದರು. ಅವನ್ನು ಕೊಂಡುಕೊಂಡು ತಮ್ಮ ಸ್ನೇಹಿತರಿಗೆ ಹಂಚಬೇಕೆಂಬುದು ಅವರ ಆಶಯವಾಗಿತ್ತು. ಇದಕ್ಕೆ ಸ್ವಲ್ಪ ಮುಂಚೆ ಕೇಂಬ್ರಿಜ್‌ನಲ್ಲಿ ನಡೆದ ಒಂದು ಸಭೆಯ ಕುರಿತಾಗಿ ಅವರು ಆಗ ಹೇಳಿದರು. ಆ ಸಭೆಯಲ್ಲಿ ಮನಶ್ಶಾಸ್ತ್ರಜ್ಞರು, ಧಾರ್ಮಿಕ ಮುಂದಾಳುಗಳು, ವಿಜ್ಞಾನಿಗಳು ಮತ್ತು ಇತರರು ಭಾಗವಹಿಸಿದ್ದರಂತೆ. ಸಭೆಯಲ್ಲಿ ಚರ್ಚೆಯ ವಿಷಯ:"ಆಧುನಿಕ ಅಮೆರಿಕದ ಧೋರಣೆ."

ಸಭೆಯಲ್ಲಿ ವಾಣಿಜ್ಯ, ರಾಜಕೀಯ ಮುಂತಾದ ಅನೇಕ ವಿಷಯಗಳ ಬಗ್ಗೆ ಚರ್ಚಿಸಲಾಯಿತು. ಕೊನೆಯಲ್ಲಿ ಒಬ್ಬ ಸಮಾಜ ವಿಜ್ಞಾನಿ ಎದ್ದು ನಿಂತು ಹೇಳಿದ : "ಅಮೆರಿಕದಲ್ಲಿ ನಾವು ಅನೇಕರು 'ಡಾಲರ್ ರಾಜನನ್ನೂ ಕಾಮಿನಿ ರಾಣಿಯನ್ನೂ' ಆರಾಧಿಸುತ್ತೇವೆ." ಮೇಲೆ ಉಲ್ಲೇಖಿಸಿದ ಪ್ರೊಫೆಸರ್ ಹೇಳಿದರು : "ಕೂಡಲೆ ನನಗೆ ಶ್ರೀರಾಮಕೃಷ್ಣರು ವಚನವೇದದಲ್ಲಿ ಕಾಮಿನಿ-ಕಾಂಚನದ ಬಗ್ಗೆ ಹೇಳಿದ ವಿಷಯ ನೆನಪಿಗೆ ಬಂತು. ಅಮೆರಿಕದಲ್ಲಿ ನಮಗೆ ಭಾರತಕ್ಕಿಂತ ಜಾಸ್ತಿಯಾಗಿ ಶ್ರೀರಾಮಕೃಷ್ಣರ ಬೋಧನೆಯ ಅಗತ್ಯವಿದೆ. ಆದ್ದರಿಂದಲೇ ನನ್ನ ಕೆಲವು ಸ್ನೇಹಿತರಿಗೆ 'ಶ್ರೀರಾಮಕೃಷ್ಣ ವಚನವೇದ'ದ ಕೆಲವು ಪ್ರತಿಗಳನ್ನು ನೀಡಬೇಕೆಂದು ಬಯಸುತ್ತೇನೆ." ನಾನು "ವಚನವೇದ"ದ ಕೆಲವು ಪ್ರತಿಗಳನ್ನು ಆ ಪ್ರೊಫೆಸರರಿಗೆ ನೀಡಿದೆ.

*—ಸ್ವಾಮಿ ಸರ್ವಗತಾನಂದ, ಬಾಸ್ಟನ್ ವೇದಾಂತ ಕೇಂದ್ರದ ಮುಖ್ಯಸ್ಥರು*

ಶ್ರೀರಾಮಕೃಷ್ಣರು ತಮ್ಮ ದೇಹವನ್ನು ತೋರುತ್ತಾ "ಇದೊಂದು ಕ್ಷೇತ್ರ ಅಷ್ಟೆ. ಜಗನ್ಮಯಿಯ ವಾಸಸ್ಥಳಕ್ಕೆ ಯೋಗ್ಯವಾಗಿದೆ" ಎಂದು ಹೇಳುತ್ತಿದ್ದರು.